ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-560001**

ಸಂಖ್ಯೆ: ಜಂ.ನಿ(ಆಡಳಿತ) ಖಾಯಂ.ಪೂ.ಸೇ.ಘೋ/1/2021-22 ದಿನಾಂಕ:17/09/2022

**ಜ್ಞಾಪನ**

ವಿಷಯ : ಇಲಾಖೆಯ ವಿವಿಧ ಕಛೇರಿಗಳಲ್ಲಿನ ಪ್ರ.ದ.ಸ / ದ್ವಿ.ದ.ಸ ನೌಕರರ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣಿತಿಯ ಪರೀಕ್ಷಣೆಗೆ ಲಿಖಿತ ಪರೀಕ್ಷೆಯನ್ನು ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ : 1.ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ5(7) ಖಾ.ಪೋ.ಸೇ.ಘೋ.ಕು:2021-22 ದಿನಾಂಕ:04-01-2022.
2.ಈ ಕಛೇರಿ ಜ್ಞಾಪನ ಸಮ ಸಂಖ್ಯೆ: ದಿನಾಂಕ:07/02/2022.
3.ಈ ಕಛೇರಿ ಜ್ಞಾಪನ ಸಮಸಂಖ್ಯೆ ದಿನಾಂಕ 16-08-2022.
4.ದಿನಾಂಕ 17-09-2022ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಪುನರಾವಲೋಕನ ಸಭೆಯಲ್ಲಿನ ಸೂಚನೆ.

~ ~ ~

ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖಾ ವ್ಯಾಪ್ತಿಯಲ್ಲಿನ ವಿವಿಧ ಹಂತದ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರ.ದ.ಸ ಹಾಗೂ ದ್ವಿ.ದ.ಸ ನೌಕರರುಗಳು, ಆಡಳಿತ ನಿರ್ವಹಣೆಯಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಕೊಳ್ಳಲು ಅನುವಾಗುವಂತೆ, ಆಯಾ ಶಾಖೆಗಳಲ್ಲಿ ನಿರ್ವಹಣೆಯಾಗುವ ವಿಷಯಗಳು ಮತ್ತು ಸಾಮಾನ್ಯ ಆಡಳಿತ ವಿಷಯಗಳಲ್ಲಿ ಸಿಬ್ಬಂದಿಗಳು ಹೊಂದಿರುವ ಜ್ಞಾನ ಮತ್ತು ಪರಿಣತಿಯನ್ನು ಕಾಲದಿಂದ ಕಾಲಕ್ಕೆ ಪರೀಕ್ಷಿಸುವುದು ಸೂಕ್ತ.

ಇದರಿಂದ ಸಹಾಯಕ ಸಿಬ್ಬಂದಿಗಳು ಆಯಾ ವಿಷಯಗಳ ಕಡತ ನಿರ್ವಹಣೆಯಲ್ಲಿ ವಿಷಯ ಜ್ಞಾನವನ್ನು ಹೆಚ್ಚಿಸಿಕೊಂಡು ಸಮಂಜಸ ಮತ್ತು ಯುಕ್ತ ಪಾತ್ರವನ್ನು ವಹಿಸಲು ಪ್ರೇರೇಪಿಸುವುದು ಸಾಧ್ಯವಾಗುತ್ತದೆ. ಇದರಿಂದ ಕೇಂದ್ರ ಕಛೇರಿಗಳು, ವಿಭಾಗೀಯ ಕಛೇರಿಗಳು, ಜಿಲ್ಲಾ ಕಛೇರಿಗಳು ಮತ್ತು ತಾಲ್ಲೂಕು ಹಂತಗಳಲ್ಲಿನ ಕಛೇರಿಗಳ ಆಡಳಿತದಲ್ಲಿ ಮತ್ತಷ್ಟು ಸುಧಾರಣೆ ಮತ್ತು ಚುರುಕುತನ ಬರಲಿದೆ. ಪ್ರಯುಕ್ತ ಕಾಲಿಕವಾಗಿ, ಪ್ರತಿ ಅರ್ಧವಾರ್ಷಿಕ ಅವಧಿಯಲ್ಲಿ ಒಮ್ಮೆ, ತಮ್ಮ ಅಧೀನದ ಎಲ್ಲಾ ಕಛೇರಿ / ಶಾಖೆಗಳಲ್ಲಿನ ಎಲ್ಲಾ ಪ್ರ.ದ.ಸ ಮತ್ತು ದ್ವಿ.ದ.ಸ ನೌಕರರಿಗೆ ಆಯಾ ಕಛೇರಿ / ಶಾಖಾ ಮುಖ್ಯಸ್ಥರ ವತಿಯಿಂದ ಶಾಖಾವಾರು ಲಿಖಿತ ಪರೀಕ್ಷೆಯನ್ನು ಹಮ್ಮಿಕೊಳ್ಳಲು ತಿಳಿಸಿದೆ.

ಸದರಿ ಲಿಖಿತ ಪರೀಕ್ಷೆಯಲ್ಲಿ ಆಯಾ ಶಾಖೆಗಳಲ್ಲಿ ನಿರ್ವಹಣೆಯಾಗುತ್ತಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ಇರುವ ಕಾಯ್ದೆ/ನಿಯಮ/ಇಲಾಖಾ ಅಧಿಸೂಚನೆಗಳ ಕುರಿತಂತೆ ಸಿಬ್ಬಂದಿಗಳಲ್ಲಿ ಇರುವ ಪರಿಣತಿಯನ್ನು ಮತ್ತು ಸಾಮಾನ್ಯ ಆಡಳಿತ ವಿಷಯಗಳಲ್ಲಿ ಇರುವ ಪರಿಣತಿಯನ್ನು ಪರೀಕ್ಷಿಸಲು ಪ್ರಶ್ನೆ ಪತ್ರಿಕೆಯನ್ನು 100 ಅಂಕಗಳಿಗೆ ತಯಾರಿಸಿಕೊಂಡು ಪ್ರತಿ ಅರ್ಧ ವಾರ್ಷಿಕ ಅವಧಿಗೆ ಪರೀಕ್ಷೆಯನ್ನು ಹಮ್ಮಿಕೊಂಡು, ಮೌಲ್ಯಮಾಪನ ನಡೆಸಿ, ವಿಷಯನಿರ್ವಾಹಕರು ಹೊಂದಿರುವ ವಿಷಯ ಪರಿಣತಿ ಕುರಿತು ವರದಿಯನ್ನು ಜಂಟಿ ನಿರ್ದೇಶಕರು (ಆಡಳಿತ), ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಲು ತಿಳಿಸಿದೆ.

ಪ್ರಸ್ತುತ ಅರ್ಧವಾರ್ಷಿಕ ಅವಧಿಯ ಪರೀಕ್ಷಣೆಯನ್ನು ಕೂಡಲೇ ಹಮ್ಮಿಕೊಂಡು ದಿನಾಂಕ:15-10-2022ರೊಳಗಾಗಿ ವರದಿ ಸಲ್ಲಿಸಲು ಸೂಚಿಸಿದೆ. ಯಾವುದೇ ಕಾರ್ಯನಿರ್ವಾಹಕರು ಪರೀಕ್ಷೆಯಲ್ಲಿ ಗೈರು ಹಾಜರಾಗುವಂತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ಪರೀಕ್ಷೆ ಹಮ್ಮಿಕೊಳ್ಳಬಹುದಾದ ಮಾದರಿ ಪಠ್ಯವಸ್ತು/ವಿಧಾನದ ಕುರಿತಂತೆ ಉಲ್ಲೇಖಿತ ಜ್ಞಾಪನ/ಸುತ್ತೋಲೆ ಅಂಶಗಳನ್ನು ಗಮನಿಸತಕ್ಕದ್ದು. ಅನಗತ್ಯ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.

**ಡಾ.ವಿಶಾಲ್.ಆರ್. ಭಾ.ಆ.ಸೇ**
**ಆಯುಕ್ತರು**

ಗೆ,

1. ನಿರ್ದೇಶಕರು(ಕಾರ್ಯಕ್ರಮ), ಸಮಗ್ರ ಶಿಕ್ಷಣ ಕರ್ನಾಟಕ/ ಅಪರ ಆಯುಕ್ತರ ಕಛೇರಿ, ಕಲ್ಬುರ್ಗಿ/ ಧಾರವಾಡ ಮತ್ತು ಸಿಸ್ಲೆಪ್ ಧಾರವಾಡ
2. ವಿಭಾಗೀಯ ಸಹ ನಿರ್ದೇಶಕರು ಕಲ್ಬುರ್ಗಿ ಮತ್ತು ಧಾರವಾಡ
3. ಪ್ರಾಂಶುಪಾಲರು, ಸಿಟಿಇ, ಕಲ್ಬುರ್ಗಿ/ಬೆಳಗಾವಿ/ಜಮಖಂಡಿ/ ಮೈಸೂರು/ಚಿತ್ರದುರ್ಗ/ ಮಂಗಳೂರು
4. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) / ಅಭಿವೃದ್ಧಿ

**ಪ್ರತಿಯನ್ನು ಮಾಹಿತಿಗಾಗಿ**:

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
2. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲ್ಬುರ್ಗಿ ಮತ್ತು ಧಾರವಾಡ (3) ಮಾನ್ಯ ಆಯುಕ್ತರ ಆಪ್ತ ಶಾಖೆಗೆ.
3. ಜಂಟಿನಿರ್ದೇಶಕರು (ಆಡಳಿತ) ರವರ ಆಪ್ತ ಶಾಖೆಗೆ (5) ಕಛೇರಿ ಪ್ರತಿ.